ಹುಕುಮಥ ಕೆಲಸ ಮುಂದುವೆರಿದಿದೆ ನಿನ್ನೆ ದಿವಸ ನಾನು ಶಿಕಾರಿಪುರದಿಂದ ಬಂದ ಸ್ವಾಮಿ, ಶಿಕಾರಿಪುರ ತಾಲ್ಲೂಕಿನ ಸಾಲೂರ್ ಎಂಬಲ್ಲಿ ಕೆನರಾ ಬ್ಯಾಂಕ್ ಇದೆ. ಬನ್ನೂರ್‌ನಲ್ಲಿ ಇಬ್ಬರು ರೈತರು ಶ್ರೀ ಹಿರಿಯಣ್ಣಪ್ಪ ಮತ್ತು ದ್ಯಾವಪ್ಪ ಎನ್ನುವವರು ಇಬ್ಬರೂ ಸೇರಿ 9542 ರೂಪಾಯಿಗಳ ಬಡ್ಡಿ ಮತ್ತು ಅಸಲು ಸೇರಿ ಬ್ಯಾಂಕಿಗೆ ಕೊಡಬೇಕಾಗಿದೆ. ಅವರುಗಳ ಮೇಲೆ ಕೇಸ್‌ನಂಬರ್ ಇ.ಎಕ್ಸ್ 11:91 ಮತ್ತು ಕೇಸ್‌ನಂಬರ್ ಇ. ಎಕ್ಸ್ 114:91ರ ಪ್ರಕಾರ ಸಿವಿಲ್ ಕೋರ್ಟಿನಲ್ಲಿ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಲು ಕೆನರಾ ಬ್ಯಾಂಕ್‌ನವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಅಂದರೆ ಅತಿ ವೃಷ್ಟಿಯಿಂದ ಬೆಳೆ ಸಂಪೂರ್ಣವಾಗಿ ನಾಶ ಆಗಿರುವಂತಹ ಈ ಸಂದರ್ಭದಲ್ಲಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕು. ಅವರ ನೆರವಿಗೆ ಬರಬೇಕು ಎಂದು ಸರ್ಕಾರ ಯೋಚನೆ ಮಾಡುತ್ತಿರುವಂತಹ ಕಾಲದಲ್ಲಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿರುವವರ ಪರಿಸ್ಥಿತಿ ಇವತ್ತು ವಿಕೋಪಕ್ಕೆ ಹೋಗುತ್ತಿದೆ. ಮತ್ತೊಂದು ಕಡೆ ರೈತನ ಮನೆ ಮಠಗಳನ್ನು ಹರಾಜು ಮಾಡುವಂಥದ್ದು ಪ್ರತಿನಿತ್ಯ ನಡೆಯುತ್ತಿದೆ. 'ಏಕೋ' ಏನೋ ಗೊತ್ತಿಲ್ಲ. ರೈತನ ವಿಷಯ ಬಂದಾಗ, ತಾವೊಂದು ಹೇಳುವಂಥದ್ದು ನಾವೊಂದು ಹೇಳುವಂತಹದು ಆಗಬಾರದು ಎಂದು ಹೇಳಿ ನಾವೆಲ್ಲ ಒಟ್ಟಿಗೆ ಸೇರಿಕೊಂಡು ನೆರೆ ಹಾವಳಿಗೆ ಸಿಕ್ಕಿರುವಂತಹ, ಬರಗಾಲಕ್ಕೆ, ಅತಿವೃಷ್ಟಿಗೆ ಸಿಕ್ಕಿರುವಂತಹ ರೈತರಿಗೆ ನೆರವು ಕೊಡಬೇಕು ಎಂಬ ದೃಷ್ಟಿಯಿಂದ ಒಮ್ಮತದ ಅಭಿಪ್ರಾಯಕ್ಕೆ ಬಂದು ಇಲ್ಲಿ ಅದರ ಚರ್ಚೆಯನ್ನು ವಿಶೇಷವಾಗಿ ಮಾಡಿದ್ದೇನೆ. ಮುಖ್ಯಮಂತ್ರಿಗಳ ಜೊತೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಕುಳಿತುಕೊಂಡು ಮಾತನಾಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ನಾಳೆ ಅಧಿವೇಶನ ಮುಕ್ತಾಯವಾಗುತ್ತಿದೆ. ಇವೊತ್ತು ನಮ್ಮ ರೈತರ ಪರಿಸ್ಥಿತಿ ದಯನೀಯವಾಗಿದೆ ತುಂಬಾ ಪ್ರಭಾವಿತರಾಗಿ ಈ ಸರ್ಕಾರದ ಮನವೊಲಿಸುವುದಕ್ಕಾಗಿ ನಾವು ಇಲ್ಲಿ ಚರ್ಚೆ ಮಾಡಲಿಲ್ಲ. ಕಾರಣವೇನೆಂದರೆ, ನಮ್ಮ ಜೊತೆ ನೀವು ಮಾತನಾಡಿದ್ದಾಗ, ನಾವು ಒಂದು ಒಮ್ಮತಕ್ಕೆ ಬಂದಿದ್ದೆವು. ನಾನು ಇವೊತ್ತು ಒತ್ತಾಯ ಮಾಡುತ್ತೇನೆ, ರೈತರನ್ನು ನಡುನೀರಿನಲ್ಲಿ ಕೈಬಿಡುವಂಥ ಕೆಲಸ ಮಾಡುವುದು ಬೇಡ, ಈ ಸದನದಲ್ಲಿರುವ ಎಲ್ಲರಿಗೂ ಕಳಕಳಿ ಇದೆ. ಅದೇ ದಿಕ್ಕಿನಲ್ಲಿ, ಅದೇ ದಾಟಿಯಲ್ಲಿ ನಾವು ಮಾತನಾಡಿದ್ದೇವೆ. ಸನ್ಮಾನ್ಯ ಹಿರಿಯ ಸಚಿವರಾದ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರು ಸದನದಲ್ಲಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವು ಏನೆಂದು ತಿಳಿಸಬೇಕು. ಇಲ್ಲ ಯಡಿಯೂರಪ್ಪನವರೇ, ನಾವು ಸಾಲ ಮನ್ನಾ ಆಗಬೇಕೆಂದು ಕೂಗಿದೆವು, ನಮ್ಮದೇ ಆದ ನಿಲವು, ತಪ್ಪಿನಿಂದ ಪಹಣಿಗಳನ್ನು ಬರೆಯದೆ ಕೇಂದ್ರ ಸರ್ಕಾರ ಕೆಲವು ಷರತ್ತುಗಳನ್ನು ಹಾಕಿದ ನಂತರ ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗಲಿಲ್ಲ, ಇದು ನಿಮಗೆ ಗೊತ್ತಿರತ್ತಕ್ಕಂಥ ಸಂಗತಿ. ಎಂದು ಬೇಕಾದರೆ ಹೇಳಿ. ಅತಿವೃಷ್ಟಿ, ನೆರೆಹಾವಳಿ ಬಂದು ಬೆಳೆ ನಾಶವಾಗಿರುವಂಥ ಸಂದರ್ಭದಲ್ಲಿ ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ ರೈತರಿಗೆ ಹೊಸದಾಗಿ ಸಹಕಾರ ಸಂಘಗಳಿಂದ ಸಾಲ ಸಿಗುವುದಿಲ್ಲ, ಇದರಿಂದ ರೈತಾಪಿ ವರ್ಗ ಕೆಲಸ ಮಾಡುವುದಕ್ಕಾಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ? ಕೇಂದ್ರ ಸರ್ಕಾರ ಏನು ಹೇಳಿದೆ? ಒಂದು ಮಾತನ್ನು ನಾನು ಕೇಳುತ್ತಿದ್ದೇನೆ. ನೆರೆಹಾವಳಿಗೆ ಸಿಕ್ಕಿರುವಂಥ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮನವೊಲಿಸಿ, ಇವೊತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರು ಏನು ಬೆಳೆ ಸಾಲ ತೆಗೆದುಕೊಂಡಿದ್ದಾರೆ, ಅದರ ಮೇಲಿರುವಂಥ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ಕಂತುಗಳಲ್ಲಿ ಸಾಲ ಕಟ್ಟುವುದಕ್ಕೆ, ಮತ್ತು ಹೊಸ

ಸಾಲ ಕೊಡುವುದಕ್ಕೆ ಅವಕಾಶ ಮಾಡಿಕೊಡುವುದರ ಬಗ್ಗೆ ನಾವು ಯೋಚಿಸುತ್ತಿದ್ದೇವೆ. ಇನ್ನಾದರೂ ಸಹಕಾರಿ ಸಂಸ್ಥೆಗಳಿಗೆ ಆತ ಅಸಲನ್ನಾದರೂ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟು ಬೇರೆ ರೀತಿಯ ಹೊಸ ಸಾಲ ಸಿಗದಿದ್ದರೆ ರೈತಾಪಿಜನ ಕೆಲಸ ಮಾಡುವುದಕ್ಕಾಗುವುದಿಲ್ಲ. ಇನ್ನು ನಾವು ಇಲ್ಲಿಂದ ಹೋಗುತ್ತಿದ್ದಂತೆ ಮಳೆಗಾಲ ಪ್ರಾರಂಭವಾಗುತ್ತದೆ. ಇಂತಹ ಸಂದರ್ಭದಲ್ಲಿ ಅತ್ಯಂತ ಪ್ರಮುಖವಾಗಿರತಕ್ಕಂಥ ಈ ಒಂದು ವಿಚಾರದ ಬಗ್ಗೆ ಸಮಗ್ರವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇಲ್ಲ ಯಡಿಯೂರಪ್ಪನವರೇ, ನಾವು ಏನೇನೂ ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳುವುದಾದರೆ ನನ್ನದೇನೂ ವಿರೋಧವಿಲ್ಲ. ನಾನು ಒಬ್ಬ ಶಾಸಕನಾಗಿ ಅದರ ಬಗ್ಗೆ ಒತ್ತಡ ತರಬೇಕೆಂದರೆ, ನನ್ನದೇ ಆದಂಥ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಸದನದಲ್ಲಿ ಸನ್ಮಾನ್ಯ ಸಹಕಾರ ಸಚಿವರಿದ್ದಾರೆ, ಇದರ ಬಗ್ಗೆ ಸರ್ಕಾರದ ನಿಲುವು ಏನು ? ಎಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಉಪಾಧ್ಯಕ್ಷರೆ, ಈ ಕುರಿತು ನಾವು ಒಂದು ನಿಲುವಳಿ ಸೂಚನೆಯನ್ನು ತಂದನಂತರ ಮುಖ್ಯಮಂತ್ರಿಗಳು ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳ ಸಭೆ ಕರೆದು, ಈ ಸದದಲ್ಲಿ ರೈತರುಗಳ ಸಮಸ್ಯೆ ಬಗ್ಗೆ ಪರಿಣಾಮಕಾರಿಯಾಗಿ ಸರ್ಕಾರದ ನಿಲುವು ಏನೆನ್ನುವುದರ ಬಗ್ಗೆ ಸ್ಪಷ್ಟಪಡಿಸುತ್ತೇವೆಂದು ಹೇಳಿ ಸುಮಾರು ಹದಿನೈದು ದಿವಸಗಳಾದವು, ಆದರೂ ಸಹ ಇವೊತ್ತಿನವರೆಗೂ ಸರ್ಕಾರ ತನ್ನ ನಿಲುವು ಏನೆಂದು ಸ್ಪಷ್ಟ ಪಡಿಸಿಲ್ಲ. ನೆರೆ ಹಾವಳಿಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು 307 ಕೋಟಿ ರೂಪಾಯಿಗಳ ನಷ್ಟವಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಹಣ ಅತಿ ಕಡಿಮೆಯಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮನವೊಲಿಸುವುದರಲ್ಲಿ ವಿಫಲವಾಗಿದೆ. ಬಡ್ಡಿ ಅಥವಾ ಸುಸ್ತಿ ಬಡ್ಡಿ ಮನ್ನಾ ಮಾಡುವುದರ ಬಗ್ಗೆ ಸರ್ಕಾರ ಯಾವ ರೀತಿಯಾದಂಥ ನಿಲುವು ತೆಗೆದುಕೊಂಡಿದೆ ? ನಾಳೆ ಈ ಸದನವನ್ನು ಮುಂದೂಡಲಾಗುತ್ತಿದೆ ಆ ಬಗ್ಗೆ ನಾವು ತೀರ್ಮಾನ ಮಾಡುವುದೇನು ? ಸರ್ಕಾರ ಈ ಬಗ್ಗೆ ಅನೇಕ ಕಡೆ ರೈತರ ಆಸ್ತಿಯನ್ನು ಹಾಕುತ್ತಿದೆ. ಪಾತ್ರೆಗಳನ್ನು ಹೊರಗೆ ಹಾಕುತ್ತಿದ್ದಾರೆ, ಅಧಿಕಾರಿಗಳು ಮನೆಗಳಿಗೆ ನುಗ್ಗುತ್ತಿದ್ದಾರೆ, ಇಂತಹ ಪರಿಸ್ಥಿತಿಯಿರುವಾಗ ಸರ್ಕಾರ ತನ್ನ ನಿಲುವು ಏನೆಂದು ಸ್ಪಷ್ಟಪಡಿಸಬೇಕು. ಏಕೆ ಈವರೆಗೆ ಸ್ಪಷ್ಟಪಡಿಸಿಲ್ಲ? ನಾವು ಒಂದೇ ಸಮನೇ ಕೇಳುತ್ತಿದ್ದೇವೆ, ಮತ್ತು ಈ ವಿಷಯದಲ್ಲಿ ನಾವು ಒಮ್ಮತಕ್ಕೆ ಬಂದು ಸರ್ಕಾರದ ಜೊತೆ ಸಹಕರಿಸುತ್ತಿದ್ದೇವೆ. ದಯಮಾಡಿ ನೀವು ಏನಾದರೊಂದು ಚಿಂತನೆ ಮಾಡಿ ರೈತರ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಒಂದು ವ್ಯವಸ್ಥೆ ಮಾಡಿ ಎಂದು ಕೇಳುತ್ತಿದ್ದೇವೆ. ನಾವು ಇವೊತ್ತು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ನೀವು ನಮ್ಮೆಲ್ಲರನ್ನೂ ಕರೆದು ಮಾತುಕತೆಯಾಡಿದಿರಿ, ಮಾತುಕತೆಯಾಡಿದ ನಂತರ, ಈ ವಿಷಯದಲ್ಲಿ ಸದನಕ್ಕೆ ಈವರೆಗೆ ಯಾವುದೇ ಹೇಳಿಕೆಯನ್ನು ಏಕೆ ಕೊಟ್ಟಿಲ್ಲ? ಬಡ್ಡಿ ಅಥವಾ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಅಥವಾ ಇಲ್ಲವೆಂದಾದರೂ ಸರ್ಕಾರ ಹೇಳಬೇಕು. ಈ ಬಗ್ಗೆ ಸರ್ಕಾರ ಏನೊಂದೂ ಹೇಳದೆ ಮೊಂಡುತನ ತೋರಿಸುವುದಾದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ, ಇಡೀ ರಾಜ್ಯದಲ್ಲಿ ರೈತರೆಲ್ಲಾ ಕಣ್ಣೀರಿಡುತ್ತಿದ್ದಾರೆ. ನೆರೆಹಾವಳಿಯಿಂದ ಆಗಿರತಕ್ಕಂಥ ಅನಾಹುತದ ಬಗ್ಗೆ ಸರ್ಕಾರ ಪರಿಣಾಮಕಾರಿಯಾದ ಕ್ರಮ ಕೈಗೊಂಡಿಲ್ಲ. ನೆರೆಹಾವಳಿಯಿಂದ ಸುಮಾರು ಸಾವಿರಾರು

ಮನೆಗಳು ನೆಲಸಮವಾಗಿವೆ, ಮನೆಗಳನ್ನು ಕಳೆದುಕೊಂಡ ನಿರ್ಗತಿಕರು ರಸ್ತೆಗೆ ಬಂದಿದ್ದಾರೆ, ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರದಿಂದ ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಿರುವಾಗ ಇದರ ಬಗ್ಗೆ ಸರ್ಕಾರದ ನಿಲುವು ಏನೆಂದು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

* ಪ್ರೊ : ಎಂ.ಡಿ. ನಂಜುಂಡಸ್ವಾಮಿ (ಧಾರವಾಡಗ್ರಾಮಾಂತರ) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಶಿಕಾರಿಪುರದ ರೈತರ ಬಗ್ಗೆ ಹೇಳುತ್ತಿದ್ದರು. ರೈತರು ಕೊಡಬೇಕಾಗಿರತಕ್ಕಂಥ ಬಾಕಿ ಕೇವಲ 2000 ಮತ್ತು 3000 ರೂಪಾಯಿಗಳು. ಈ ಬಗ್ಗೆ ಆಗಲೇ ಕೋರ್ಟ್ ಆರ್ಡರ್ ಆಗಿದ್ದು, ಅವರನ್ನು 16 ದಿವಸಗಳಿಗೆ ಸಿವಿಲ್ ಪ್ರಿಸನ್‌ಗೆ ಕಳುಹಿಸಲಾಯಿತು. ಒಬೊಬ್ಬರಿಗೆ ದಿವಸಕ್ಕೆ 10 ರೂಪಾಯಿಯಂತೆ ಒಟ್ಟು 160 ರೂಪಾಯಿಗಳು ಕಟ್ ಆಗಿದೆ. ಆ ಕಾರಣ ನಾನು ಕೇಳುವುದೇನೆಂದರೆ.....

ಉಪಾಧ್ಯಕ್ಷರು : ಮಾನ್ಯ ಪ್ರೊಫೆಸರ್‌ರವರೇ, ತಾವು ಏನು ಮಾತನಾಡಬೇಕಾಗಿದೆ ಎಂಬುದನ್ನು ಹೇಳಿ. ನಿನ್ನೆ ದಿವಸ ಆಂಧ್ರಪ್ರದೇಶದ ರಾಯದುರ್ಗದಲ್ಲಿ ಏನು ಒಂದು ಘಟನೆಯಾಯಿತು.....ಅದರ ಬಗ್ಗೆ ಮಾತನಾಡಿ. ಈಗಾಗಲೇ ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪ ಹಾಗೂ ವಾಟಾಳ್ ನಾಗರಾಜ್‌ರವರು ಮಾತನಾಡಿದ್ದಾರೆ.

ಪ್ರೊ : ಎಂ.ಡಿ.ನಂಜುಂಡಸ್ವಾಮಿ : ಕೋಟ್ಯಾಂತರ ರೂಪಾಯಿಗಳ ಬಾಕಿ ಇರುವವರು ಇಲ್ಲಿ ಬಂದು ಮಂತ್ರಿಗಳಾಗಿ ಕುಳಿತುಕೊಳ್ಳುತ್ತಾರೆ, ಕೇವಲ 2000-3000 ರೂಪಾಯಿ ಬಾಕಿ ಇರುವವರನ್ನು ನೀವು ಸಿವಿಲ್ ಪ್ರಿಸನ್‌ಗೆ ಕಳುಹಿಸುತ್ತೀರೆಂದರೆ,ಏನಿದು ಲೆಕ್ಕಾಚಾರ? ನನಗೆ ಗೊತ್ತಾಗುತ್ತಿಲ್ಲ. ಅದನ್ನು ಬಿಟ್ಟು ಈಗ ನನ್ನ ವಿಷಯಕ್ಕೆ ಬರುತ್ತೇನೆ. ಇದರ ಬಗ್ಗೆ ಉತ್ತರ ಬರಲಿ.

ಉಪಾಧ್ಯಕ್ಷರು : ಬೈರೇಗೌಡರೇ, ನಿಮ್ಮ ವಿಷಯವನ್ನು ನಾನು ಅನಂತರ ತೆಗೆದು ಕೊಳ್ಳುತ್ತೇನೆ. ಈ ವಿಷಯವನ್ನು ಸದನದ ಗಮನಕ್ಕಲ್ಲದೆಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ತಂದಿದ್ದಾರೆ. ಆದುದರಿಂದ, ನಾನು ಅಲೋ ಮಾಡುವುದಿಲ್ಲ, ಚರ್ಚೆಗೆ ಅವಕಾಶ ಕೊಡುವುದಿಲ್ಲ.

ಶ್ರೀ.ಸಿ.ಬೈರೇಗೌಡ : ಇದು ರೈತರ ವಿಚಾರವಾಗಿದ್ದು, ಇದರ ಬಗ್ಗೆ ಸದನದಲ್ಲಿ ಹೇಳತಕ್ಕಂಥಾದ್ದು ಇದೆ.

(ಗೊಂದಲ)

ಶ್ರೀ ಸಿ.ಬೈರೇಗೌಡ : (ಮೇಮಗಲ್) ಅಧ್ಯಕ್ಷರೆ ದಯವಿಟ್ಟು ನಾವು ಹೇಳುವುದನ್ನು ಸ್ವಲ್ಪ.ಕೇಳಿ ಇಲ್ಲಿರತಕ್ಕಂಥ ವಿರೋಧ ಪಕ್ಷಗಳವರ ಅಭಿಪ್ರಾಯ ಒಬ್ಬೊಬ್ಬರದು ಒಂದೊದ್ದು ರೀತಿಯಾಗಿತ್ತು. ಆದ್ದರಿಂದ ನಾವೆಲ್ಲರೂ ಕೂಡ ಒಂದು ಕಡೆ ಕುಳಿತು ಮಾತನಾಡಿದ್ದೇವೆ. ಈ ಸಾರಿ ನಡೆದಂಥ ಸದನದಲ್ಲಿ ಇದರ ಬಗ್ಗೆ ಹೆಚ್ಚಿನ ಚರ್ಚೆಯಾಗಿಲ್ಲ. ಕಾರಣವೇನೆಂದರೆ ನಾವೆಲ್ಲಾ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ನಾವು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡಿದರೆ ಆಗ ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಪೇಚಿಗೆ ಸರ್ಕಾರವನ್ನು

ಸಿಕ್ಕಿಸಬಾರದೆಂದು ನಾವೆಲ್ಲಾ ಒಮ್ಮತಕ್ಕೆ ಬಂದು ಒಂದೇ ಅಭಿಪ್ರಾಯದಿಂದ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಮತ್ತೆ ಮುಂದೆ ಬರತಕ್ಕ ಎರಡುವರ್ಷಗಳಲ್ಲಿ ಬಡ್ಡಿ ಅಥವಾ ಸುಸ್ತಿ ಬಡ್ಡಿ ಮತ್ತು ಸಾಲ ಮನ್ನಾ ಮಾಡುವ ವಿಚಾರವನ್ನು ಎತ್ತುವುದಿಲ್ಲವೆನ್ನತಕ್ಕ ಆಶ್ವಾಸನೆಯನ್ನೂ ಕೂಡ ನಾವು ಈ ಸರ್ಕಾರಕ್ಕೆ ಕೊಟ್ಟಿದ್ದೇವೆ. ಆದರೆ ಸರ್ಕಾರ ಇದರ ಬಗ್ಗೆ ಬೇರೆ ರೀತಿಯಲ್ಲಿ ಆಲೋಚನೆ ಮಾಡುತ್ತಿದೆ. ಇದರಲ್ಲಿ ಚೌಕಾಸಿ ಮಾಡುತ್ತಿರೆಂದು ನನಗೆ ತಿಳಿದು ಬಂದಿದೆ. ಆ ರೀತಿ ಏನಾದರೂ ಚೌಕಾಸಿಯನ್ನು ಮಾಡುವ ಬಗ್ಗೆ ತೀರ್ಮಾನ ಮಾಡುವುದಾದರೆ ಸರ್ಕಾರ ತೀವ್ರವಾದ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಲ್ಲೊ ಸ್ವಲ್ಪವನ್ನು ವಜಾ ಮಾಡುವುದು ಇಲ್ಲದಿದ್ದರೆ ಸುಸ್ತಿ ಬಡ್ಡಿಯನ್ನು ಮಾತ್ರ ವಜಾ ಮಾಡುವುದು ಈ ರೀತಿಯಾಗಿ ಚೌಕಾಸಿಯನ್ನು ತಾವು ಮಾಡುವುದಾದರೆ ನಾವು ಬೀದಿಗೆ ಇಳಿಯಬೇಕಾಗುತ್ತದೆ. ನಾವು ಇದರ ಬಗ್ಗೆ ಇದುವರೆಗೂ ಕೂಡ ರಾಜಕೀಯವನ್ನು ಮಾಡಿಲ್ಲ ಆದರೆ ಇನ್ನು ಮುಂದೆ ತಾವು ಆ ರೀತಿ ಮಾಡಿದರೆ ನಾವು ರಾಜಕೀಯವನ್ನು ಕೂಡ ಮಾಡಬೇಕಾಗುತ್ತದೆಂಬ ಎಚ್ಚರಿಕೆಯನ್ನು ಕೊಡಬಯಸುತ್ತೇನೆ.ಆದ್ದರಿಂದ ನಮ್ಮೆಲ್ಲರ ಪರವಾಗಿ ಮತ್ತೊಮ್ಮೆ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒನ್ ಟೈಮ್ ಆಪರೇಷನ್ ಮೂಲಕ ವಜಾ ಮಾಡುವುದಕ್ಕೆ ನಮ್ಮ ಸಮ್ಮುಖದಲ್ಲಿ ಒಪ್ಪಿದ್ದೀರಿ, ಅದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಎಲ್ಲಾ ಪಕ್ಷಗಳೂ ಕುಳಿತುಕೊಂಡು ಸಾಲ ಮನ್ನಾ ಮಾಡಬೇಕು, ರೈತರು ತೊಂದರೆಯಲ್ಲಿದ್ದಾರೆ, ಮಹಾಪೂರ ಬಂದಿದೆ, ಬೆಳೆಗಳು ಹಾಳಾಗಿದೆ ಆದ್ದರಿಂದ ರೈತರು ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿದಾಗ ಮುಖ್ಯಮಂತ್ರಿಗಳು ಇಲ್ಲಾ ಇಲ್ಲ, ಸಾಲವನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲ, ಆದರೆ ಬಡ್ಡಿ ಮನ್ನಾ ಮಾಡತಕ್ಕದ್ದರ ಬಗ್ಗೆ ವಿಚಾರ ಮಾಡುತ್ತೇವೆ, ಹಾಗೆ ಮಾಡುವಾಗ ನಿಮ್ಮ ಜೊತೆ ಚರ್ಚೆ ಮಾಡಿ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದರು ಮತ್ತು ಆ ಬಗ್ಗೆ ಎರಡು ಮೂರು ದಿನಗಳಲ್ಲಿ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಸಹ ಅದರ ಬಗ್ಗೆ ಹೇಳಿಕೆ ಇಲ್ಲ. ರೈತರ ಮೇಲೆ ಸರ್ಕಾರ ತೂಗು ಕತ್ತಿಯಂತೆ ಇರುವುದು ಸರಿಯಲ್ಲ, ಇದರ ಬಗ್ಗೆ ನಿರ್ದಿಷ್ಟವಾದಂಥ ಒಂದು ಹೇಳಿಕೆಯನ್ನು ಕೊಡಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಅನೇಕ ಸಲ ಚರ್ಚೆಯಾಗಿದೆ ಮತ್ತು ಈವತ್ತು ಕೂಡ ಶ್ರೀಮಾನ್ ಯಡಿಯೂರಪ್ಪನವರು, ಬೈರೇಗೌಡರು, ವಾಟಾಳ್ ನಾಗರಾಜ್, ಬನ್ನಿಕೋಡ್‌ರವರು ಮತ್ತು ಪ್ರೊಃನಂಜುಂಡಸ್ವಾಮಿಯವರು ಪುನಃ ಈ ವಿಚಾರವನ್ನು ಎತ್ತಿದ್ದಾರೆ. ಈ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡತಕ್ಕದ್ದಾಗಲಿ ಅಥವಾ ನೆರೆಹಾವಳಿಯಲ್ಲಿ ನೊಂದವರಿಗೆ ಪರಿಹಾರ ಕೊಡುವುದಾಗಲೀ ಅದೇ ರೀತಿಯಲ್ಲಿ ತೊಗರಿ ಬೆಳೆ ನಾಶದ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು, ಮತ್ತು ಅದರ ಬಗ್ಗೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೂಡ ಮಾಡುತ್ತಾರೆಯು ನಾನೂಕೂಡ ಹೇಳಿದ್ದೆ ಮತ್ತು ಮುಖ್ಯಮಂತ್ರಿಗಳೂ

ಸಹ ಆ ರೀತಿ ಹೇಳಿದ್ದರು. ನಾವು ಇವತ್ತು ಬೆಳಿಗ್ಗೆ 8-30 ಕ್ಕೆ ಕ್ಯಾಬಿನೆಟ್ ಮೀಟಿಂಗ್ ಸೇರಿ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇವತ್ತು ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾರೆ. ಆದ್ದರಿಂದ ಅವರು ಹೇಳಿಕೆಯನ್ನು ಕೊಡುವವರೆಗೆ ತಾವು ಕಾಯಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ವಿಷಯ(2) ಮಾಲೂರು ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದ ಶ್ರೀಮತಿ ರಾಮಕ್ಕಾಳ್ ಮಗಳಾದ ಮಂಗಮ್ಮ ಎಂಬುವವರ ಮೇಲೆ ಡಾ : ಪಾಲಾಕ್ಷ ಎಂಬುವನು ಅತ್ಯಾಚಾರ ಮಾಡಲು ಹೋಗಿರುವುದರ ಬಗ್ಗೆ.

ಶ್ರೀ ಎನ್ .ಚಿಕ್ಕೇಗೌಡ (ಹೊಸಕೋಟೆ) : ಸನ್ಮಾನ್ಯ ಅಧ್ಯಕ್ಷರೇ, ದಿನಾಂಕಃ 6-4-1993 ರಂದು ಮಾಲೂರು ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದಂಥ ಶ್ರೀಮತಿ ರಾಮಕ್ಕ ಎಂಬುವವರ ಪುತ್ರಿಯಾದ ಮಂಗಮ್ಮ ಎಂಬುವವರ ಮೇಲೆ ಸರ್ಕಾರಿ ವೈದ್ಯರಾದಂಥ ಪಾಲಾಕ್ಷ ಎಂಬುವವರು ಅತ್ಯಾಚಾರವನ್ನು ಮಾಡಲು ಹೋದಾಗ ಆಕೆ ಹೊರಗೆ ಬಂದು ಕೂಗಿಕೊಂಡಿದ್ದಾಳೆ. ಆಗ ಸಾವಿರಾರು ಜನರು ಸೇರಿದಾಗ, ಅಲ್ಲಿನ ಪುರಸಭೆಯ ಅಧ್ಯಕ್ಷರೂ ಮತ್ತು ಎಲ್ಲಾರೂ ಬಂದರು. ಇದರ ಬಗ್ಗೆ ಪೋಲೀಸ್‌ನವರು ಮತ್ತು ಸರ್ಕಾರ ತೆಗೆದುಕೊಂಡ ಕ್ರಮವೇನು? ಈ ಪಾಲಾಕ್ಷ ಎನ್ನುವವರು ಎರಡು ವರ್ಷಗಳ ಹಿಂದೆ ಇದೇ ರೀತಿ ಬೇರೆ ಒಬ್ಬ ಹೆಣ್ಣುಮಗಳ ಮೇಲೆ ಅತ್ಯಾಚಾರವೆಸಗಲು ಪ್ರಯತ್ನ ಮಾಡಿದ್ದ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಈ ರೀತಿ ಸರ್ಕಾರಿ ವೈದ್ಯ ಒಳರೋಗಿಯಾಗಿದ್ದ ರಾಮಕ್ಕ ಎಂಬುವವರ ಮಗಳ ಮೇಲೆ ಅತ್ಯಾಚಾರ ಮಾಡಲು ಹೊರಟಿದಂಥವರನ್ನು ತಕ್ಷಣ ಅಮಾನತ್ತುಗೊಳಿಸಬೇಕಲ್ಲದೆ ಇವರ ಮೆಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಬೀದಿಯಲ್ಲಿ ಇವರೆನ್ನು ಮೆರವಣಿಗೆ ಮಾಡಿಸ ಬೇಕು. ಬೇಲಿಯೇ ಹೊಲವನ್ನು ಮೆಯ್ದಂತೆ, ಸರ್ಕಾರಿ ವೈದ್ಯರೇ ಅತ್ಯಾಚಾರಮಾಡಿದರೇ ಹೇಗೆ? ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ ಮತ್ತು ಸರ್ಕಾರದಿಂದ ಉತ್ತರವನ್ನು ಬಯಸುತ್ತೇನೆ.

* ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಇಂಥ ಘಟನೆಗಳು ರಾಜ್ಯದಲ್ಲಿ ಅಲ್ಲಲ್ಲಿ ನಡೆಯುತ್ತಿವೆ. ಮೊನ್ನೆ ರಾಯಚೂರಿನಲ್ಲಿ ಒಂದು ಘಟನೆ ಆಯಿತು. ಆದು ನಿಜವೋ, ಅಥವಾ ಸುಳ್ಳೋ ಎಂಬುದು ಹೊರಗೆ ಬರಬೇಕಾಗಿದೆ. ಆದರೆ ನಿನ್ನೆ ಮಾಲೂರಿನಲ್ಲಿ ನಡೆದಿರತಕ್ಕ ಘಟನೆ ತುಂಬಾ ಅಪಮಾನಕರವಾದುದು. ಇದನ್ನು ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ಚಿಕ್ಕೇಗೌಡರು ಮಾತನಾಡುವ ಸಂಧರ್ಬದಲ್ಲಿ ನಾನು ಹೇಳಿದೆ, ಇವನ್ನು ಕಸಬುಗಾರರೇ ಎಂದು. ಈ ವೈದ್ಯರು ಇಂಥೆ ಕೆಲಸಮಾಡುತ್ತಿರುವುದು ಇದು ಮೊದಲನೆ ಸಾರಿ ಏನೂ ಅಲ್ಲ. ಇದು ಎರಡನೇ ಸಾರಿ. ಈ ಆಸ್ಪತ್ರೆಗೆ ಒಳರೋಗಿಯಾಗಿ ಸೇರಿದ್ದವರೊಬ್ಬರನ್ನು ನೋಡಿಕೊಳ್ಳುವ ಸಲುವಾಗಿ ಅವರ ಮಗಳು ಆಸ್ಪತ್ರಗೆ ಹೊಗಿ ಅಲ್ಲಿದ್ದಾಗ ಬೆಳಗ್ಗೆ 6 ಗಂಟೆಗೇ ಆಕೆಯನ್ನು ಹಿಡಿದುಕೊಂಡು ಆಕೆಯ ಮಾನಭಂಗಮಾಡಲು ಈ ವೈದ್ಯ ಪ್ರಯತ್ನಮಾಡಿದ್ದಾನೆಂದರೆ, ಆತ ಡಾಕ್ಟರೋ, ಅಥವಾ ರಕ್ಷಸನೋ ಅಥವಾ ಬೇರೆ ಇನ್ನೇನೋ ಎಂಬುದನ್ನು ನಾವು ಇಲ್ಲಿ ಕೂತು ಊಹೆ ಮಾಡುವುದಕ್ಕಾಗುವುದಿಲ್ಲ.ಈ ಅಪಮಾನವನ್ನು ಅನುಭವಿಸಿರುವವರೇ ಹೇಳಬೇಕು. ವೈದ್ಯನಾದವನು ಇರುವುದು

ರೋಗಿಗಳ ಪ್ರಾಣವನ್ನು ಉಳಿಸುವುದಕ್ಕಿಹೊರತು ಬೇರೆಯವರ ಮಾನ ಹರಣಮಾಡುವುದಕ್ಕಲ್ಲ. ಈ ವೈದ್ಯರಿಗೆ ಇದೊಂದು ಹವ್ಯಾಸವಾಗಿದೆ.ಮಾಲೂರಿನ ಜನರು ಬಹಳ ಶಾಂತಸ್ವಭಾವದವರು. ದುಡುಕಿ ಅವರು ಯಾವುದೇ ರೀತಿಯ ಅಚಾತುರ್ಯವನ್ನೂ ಮಾಡುವುದಕ್ಕೆ ಹೋಗಿಲ್ಲ. ಒಂದುವೇಳೆ ಅಲ್ಲಿ ಸೇರಿದ್ದಂಥ ಜನರು ತಮ್ಮ್ಮಮನಸ್ಸಿನ ಸ್ಥೈರ್ಯವನ್ನುಕಳೆದುಕೊಂಡು ಆಸ್ಪತ್ರೆಗೆ ಅಥವಾ ಪೋಲಿಸ್ ಸ್ಟೇಷನ್‌ಗೆ ನುಗ್ಗಿ ಏನಾದರೂ ಅಚಾತುರ್ಯವನ್ನು ಮಾಡಿದ್ದಿದ್ದರೆ ಇದಕ್ಕೆ ಯಾರು ಜವಾಬ್ದಾರರಾಗಬೇಕಾಗಿತ್ತು? ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿ ಆ ವೈದ್ಯ ಯಾರಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.ಇಲ್ಲಿ ಸದಸ್ಯರ ಸಮಾಧಾನಕ್ಕೆ ಉಪಚಾರಕ್ಕಾಗಿ ಒಂದು ಹೇಳಿಕೆಯನ್ನು ಕೊಡತಕ್ಕದ್ದು ಬೇಡ. ಈ ಘಟನೆ ಇಲ್ಲಿಗೆ ಮರೆತು ಹೋಗತಕ್ಕದ್ದು ಬೇಡ. ಇದು ಎರಡನೇಸಾರೀ ನಡೆದಿರುವುದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ವೈದ್ಯ ಸರ್ಕಾರೀ ಸೇವೆ ಮಾಡಿರತಕ್ಕದ್ದು ಸಾಕು. ಅವರನ್ನು ಈ ಕೂಡಲೇ ಸರ್ಕಾರೀ ಸೇವೆಯಿಂದಲೇ ವಜಾ ಮಾಡಿ, ಸಾಮಾನ್ಯ ಖೈದಿಯ ರೀತಿಯಲ್ಲಿ ಕೈಗೆ ಕೋಳ ತೊಡಿಸಿ ಮಾಲೂರು ಬೀದಿಯಲ್ಲಿ ಮಾತ್ರವಲ್ಲ ಇಡೀ ಮಾಲೂರು ತಾಲೂಕಿನಲ್ಲೆಲ್ಲಾ ಮೆರವಣಿಗೆ ಮಾಡಿಸಬೇಕು. ಈ ರೀತಿ ಮಾಡಿದರೆ ಇಂಥ ಅಮಾನವೀಯ ಕೃತ್ಯವನ್ನು ಮಾಡತಕ್ಕ ಎಲ್ಲ ವೈದ್ಯರಿಗೂ ಹೆದರಿಕೆ ಬರುತ್ತದೆ. ಪೋಲೀಸರು ಆ ಸ್ಥಳಕ್ಕೆ ಹೋಗಿದ್ದಾರೆ. ಅವರೇನಾದರೂ ಅಲ್ಲಿಗೆ ಹೋಗದೇ ಇದ್ದಿದ್ದರೆ ಅನಾಹುತ ನಡೆಯುತ್ತಿತ್ತು. ಈಗಾಗಲೇ ಸರ್ಕಾರಕ್ಕೆ ಇದರ ಬಗ್ಗೆ ವರದಿ ಬಂದಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಸರ್ಕಾರ ಹೇಳಿಕೆಯನ್ನು ಕೊಡಬೇಕು. ಸರ್ಕಾರ ಇವತ್ತು ಆ ವೈದ್ಯರ ವಿರುದ್ಧ ಉಗ್ರ ಕ್ರಮವನ್ನುತೆಗೆದುಕೊಳ್ಳದಿದ್ದರೆ ನಾವು ನಮ್ಮ ಉಗ್ರತೆಯನ್ನು ಇಲ್ಲಿ ಪ್ರದರ್ಶನ ಮಾಡಬೇಕಾಗುತ್ತದೆಂಬ ಎಚ್ಚರಿಕೆಯನ್ನು ತಮ್ಮ ಮುಖೇನ ಸರ್ಕಾರಕ್ಕೆ ಕೊಡಬಯಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ನಾವು ಮೊದಲು ಮಾಲೂರಿನ ವಿಷಯವನ್ನು ಮಾತನಾಡುತ್ತೇವೆ ಅನಂತರ ಮಾನ್ಯ ಪ್ರೊಫೆಸರ್‌ರವರು ಮಾತನಾಡಲಿ.

ಶ್ರೀ ಸಿ. ಬೈರೇಗೌಡ : ದಯವಿಟ್ಟು ಈ ವಿಚಾರದಲ್ಲಿ ಸರ್ಕಾರದಿಂದ ಉತ್ತರ ಕೊಡಿಸಿ.

ಉಪಾಧ್ಯಕ್ಷರು : ನಂಜುಂಡಸ್ವಾಮಿಯವರೇ ತಾವು ಮಾತನಾಡಿ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ .....

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ನಾನು ಮಾನ್ಯ ನಂಜುಂಡಸ್ವಾಮಿಯವರಿಗೆ ಕರೆದಿದ್ದೇವೆ. ಅವರು ಮಾತನಾಡಲಿ. ಅನಂತರ ನೀವು ಮಾತನಾಡಿ.